

# ಮೋಸಹೋದ ಕರಡಿ

ಒಂದು ಕಾಡಿನಲ್ಲಿ ನರಿಯು ಬಹುತೇಕ ಎಲ್ಲಾ ಪ್ರಾಣಿಗಳ ಮಾಂಸದ ರುಚಿಯನ್ನು ನೋಡಿತ್ತು. ಆದರೆ ಕರಡಿಯ ಮಾಂಸದ ರುಚಿ ನೋಡಿರಲಿಲ್ಲ. ಹಾಗಾಗಿ ಅದು ಕರಡಿಯ ಸ್ನೇಹವನ್ನು ಸಂಪಾದಿಸಲು ಹಾತೊರೆಯುತ್ತಿತ್ತು. ಅದೊಂದು ಸಲ ಕರಡಿಯು ತನ್ನ ಗುಹೆಯಿಂದ ಹೊರಬಂದು ಆಹಾರಕ್ಕಾಗಿ ಹೊರಟಿತ್ತು. ಇದೇ ಅವಕಾಶಕ್ಕಾಗಿ ಕಾಯುತ್ತಿದ್ದ ನರಿಯು ಕರಡಿಯ ಹತ್ತಿರ ಬಂದಿತು.

'ಗೆಳೆಯಾ ನನಗೆ ನಿನ್ನ ಸ್ನೇಹ ಬೇಕು. ನೀನು ಬಯಸುವುದಾದರೆ ನಾವಿಬ್ಬರೂ ಇಂದಿನಿಂದ ಸ್ನೇಹಿತರಾಗೋಣ...' ಎಂದು ಕುಹಕ ನುಡಿಗಳನ್ನಾಡಿತು. ಕೂಡಲೆ ಕರಡಿಯು ನರಿಯ ಸ್ನೇಹಕ್ಕೆ ಸಮ್ಮತಿ ಸೂಚಿಸಿತು. ಕೆಲವು ದಿನಗಳವರೆಗೆ ನರಿಯು ಒಳ್ಳೆಯ ಸ್ನೇಹಿತನಂತೆ ನಟಿಸಿತು.

ಒಂದು ದಿನ ನರಿಯು ಕರಡಿಗೆ 'ಮಿತ್ರಾ ನಿನ್ನ ಮೈ ಮೇಲಿನ ರೋಮಗಳು ನಿನಗೆ ಭಾರವೆನಿಸುವುದಿಲ್ಲವೇ? ನೋಡಲು ಸಹ ತುಂಬಾ ಅಸಹ್ಯವಾಗಿ ಕಾಣಿಸುತ್ತವೆ! ಒಮ್ಮೆ ನಿನ್ನ ರೋಮಗಳನ್ನು ಕತ್ತರಿಸಿಕೊಂಡುಬಿಡು. ನಂತರ ನೀನು ಬಯಸುವುದಾದರೆ ಮತ್ತೆ ರೋಮಗಳನ್ನು ಮೊದಲಿನಂತೆಯ ಬಿಡಬಹುದು' ಎಂದು ಕುಟಿಲ ಮಾತುಗಳನ್ನಾಡಿತು.

ನರಿಯ ಕಪಟ ನುಡಿಗಳು ಕರಡಿಗೆ ಸಮಂಜಸವೆನಿಸಿದವು. ನಂತರ ಅದು ನರಿಗೆ 'ಮಿತ್ರಾ ನಿನ್ನ ಇಚ್ಛೆಯಂತೆಯ ನನ್ನ ಮೈಮೇಲಿನ ರೋಮಗಳನ್ನು ಒಂದೂ ಬಿಡದೆ ಕತ್ತರಿಸಿ ಹಾಕಿಬಿಡು' ಎಂದು ಪ್ರೀತಿಯಿಂದ ಹೇಳಿತು. ತಕ್ಷಣವೆ ನರಿಯು ಒಂದು ಹರಿತವಾದ ವಸ್ತುವನ್ನು ತಂದು ಕರಡಿಯ ಮೈಮೇಲಿನ ರೋಮಗಳನ್ನು ಬಿಡದೆ ಕತ್ತರಿಸಿಹಾಕಿತು. ನಂತರ ಅದರ ಮೈಮೇಲೆ ಬಿದ್ದು ಭಕ್ಷಿಸತೊಡಗಿತು.

**-ರಾಜಕುಮಾರ ಭೀ. ವಗ್ಯಾನವರ, ಬಾಗಲಕೋಟೆ**

## ನಿಮಗೆಷ್ಟು ಗೊತ್ತು — ಅರವತ್ತನಾಲ್ಕು ವಿದ್ಯೆಗಳು

1. ವೇದ
2. ನ್ಯಾಯ
3. ಗಾನ
4. ದೇಶ ಭಾಷಾಜ್ಞಾನ
5. ಸ್ವರ ಪರೀಕ್ಷೆ
6. ಸ್ವರ್ಣ ಪರೀಕ್ಷೆ
7. ಮಲ್ಲವಿದ್ಯೆ
8. ಧಾತುವಾದ
9. ಜಲಸ್ತಂಭ
10. ಆಕರ್ಷಣೆ
11. ಮಾರಣ
12. ಕೃಷಿ
13. ಪ್ರತಿ ಕೌಶಲ್ಯ
14. ಚಿತ್ರಲೇಖ
15. ಔಷಧ ಸಿದ್ಧ
16. ಅಂಜನ
17. ವೇದಾಂಗ
18. ಕಾವ್ಯ
19. ಕವಿತ್ವ
20. ಲಿಪಿಕರ್ಮ
21. ಶಾಸ್ತ್ರ ಪರೀಕ್ಷೆ
22. ಪಾಕ ಕರ್ಮ
23. ಖನಿವಾರ
24. ವಾಯುಸ್ತಂಭ
25. ಮೋಹನ
26. ಕಾಲವಂಚನ
27. ಸಮಶರ್ಮ
28. ದೃಷ್ಟಿಕರಣೆ
29. ಮಂತ್ರಸಿದ್ಧಿ
30. ಜಲಪ್ಲವನ
31. ಇಂದ್ರಜಾಲ
32. ಇತಿಹಾಸ
33. ಅಲಂಕಾರ
34. ಕಾಮಶಾಸ್ತ್ರ
35. ವಾಚನ
36. ಶಕುನ ಪರೀಕ್ಷೆ
37. ರತ್ನ ಪರೀಕ್ಷೆ
38. ಗಜ ಲಕ್ಷಣ
39. ದೋಹಳ
40. ರಸವಾಳ
41. ಖಡ್ಗ ಸ್ತಂಭ
42. ವಿದ್ವೇಷಣೆ
43. ವಾಣಿಜ್ಯ
44. ಲಾವುಕ ಯುದ್ಧ
45. ದ್ಯೂತಕರಣ
46. ಸ್ವರವಂಚನ
47. ವಾಕ್ ಸಿದ್ಧಿ
48. ಮಹೇಂದ್ರ ಜಾಲ
49. ಆಗಮ
50. ನಾಟಕ
51. ದ್ಯೂತ ನೈಪುಣ್ಯ
52. ಸಮಸ್ತಾವಧಾನ
53. ಸಾಮುದ್ರಿಕ ಪರೀಕ್ಷೆ
54. ಆಶ್ವಲಕ್ಷಣ
55. ಗ್ರಂಥವಾದ
56. ಅಗ್ನಿ ಸ್ತಂಭ
57. ವಶ್ಯ
58. ಉಚ್ಛಾಟನಾ
59. ಪಶುಪಾಲನ
60. ಮೃಗಯಾ
61. ಚಾರ್ಯ
62. ದೃಷ್ಟಿವಂಚನಾ
63. ಘಟನಾ ಸಿದ್ಧಿ
64. ಪಾದುಕಾ ಸಿದ್ಧಿ

(ಸಂಗ್ರಹ)

**ಈರಣ್ಣ ಬೆಂಗಾಲಿ, ರಾಯಚೂರು**